

ಗಬಕ್ಕನೆ ಒಳಗೆಳೆದುಕೊಂಡಿತು. ಕಳೆದುಹೋದ ಭಯದಲ್ಲಿ ಅವಳು ಚೀರಿದಳು. ಕಣ್ಣು ಬಿಟ್ಟಳು. ನೊಣವೊಂದು ಎಡಗಣ್ಣಿನಂಚಿನಿಂದ ಬಲಗಣ್ಣಿನಂಚಿಗೆ ಹಾರಿ ಸಂಭ್ರಮಿಸತೊಡಗಿತು. ರಂಗಜ್ಜಿ ಚೀರಿದ ಸದ್ದಿಗೆ ಆತಂಕಗೊಂಡ ಕುಸುಮ ಪಕ್ಕದಲ್ಲಿ ಕುಳಿತುಕೊಂಡು 'ಏನಾಯ್ತಜ್ಜಿ' ಎಂದು ಕೇಳಿದಳು. ರಂಗಜ್ಜಿ ಮೊಮ್ಮಗಳ ಕಡೆಗೆ ನೋಡಿದಳು. ಕಂಗಳು ನಿರ್ಮಲವಾಗಿದ್ದವು. ಅವಳನ್ನೇ ನೋಡುತ್ತಾ 'ಅದು... ಒಬ್ಬ ರಾಕ್ಷಸ ಕನಸುನಾಗ ತರುಮಿಕೊಂಡು ಬಂದ. ತಪ್ಪಿಸ್ಕೊಂಡು ಓಡ್ದೆ. ಓಡ್ತಾನೆ ಇದ್ದೆ. ದೊಡ್ಡ ನದಿ ಅಡ್ಡ ಬಂತು. ಆ ನದೀಗೆ ಬಿದ್ರೂ ಸತ್ತೋಗ್ತೀನಿ; ಆ ರಾಕ್ಷಸನ ಕೈಗೆ ಸಿಕ್ರೂ ಸತ್ತೋಗ್ತೀನಿ. ನಂಕೆ ಸಾಯಕ್ಕೆ ಇಷ್ಟಿಲ್ಲ. ಬದುಕಬೇಕನಿಸ್ತು. ನದಿ ಅಂಚಿನಿಂದ ಮತ್ತೂ ಓಡ್ದೆ. ಸಮುದ್ರ ಅಡ್ಡ ಬಂತು. ಸಮುದ್ರ, ನದಿ, ರಾಕ್ಷಸ... ಹೇಗೆ ತಪ್ಪಿಸಿಕೊಳ್ಳೋದು ಅಂತ ಗೊತ್ತಾಗ್ದೆ ಚೀರ್ದೆ. ಅಷ್ಟರಾಗೆ ನೀ ಬಂದೆ' ಎಂದು ನುಡಿದು ತುಸು ನಕ್ಕಳು. ಕುಸುಮ 'ಅಯ್ಯೋ ಅಜ್ಜೀ...' ಎನ್ನುತ್ತಾ ಎದ್ದು ನಿಂತಳು. ಬಿಸಿಲು ರಂಗಜ್ಜಿಯ ಹತ್ತಿರ ಬರಲು ಹವಣಿಸುತ್ತಿತ್ತು. ಅವಳು 'ವಸಿ ನನ್ನ ವಳಕ್ಕೆ ಎತ್ಕಂಡೋಗಿ ಹಾಲಿನಾಗೆ ಇಕ್ರೆ' ಎಂದಳು.

ಸುಶೀಲ ಮತ್ತು ಕುಸುಮ ಇಬ್ಬರೂ ಸೇರಿ ರಂಗಜ್ಜಿ ಮಲಗಿರುವ ದಿವಾನಾವನ್ನು ಹಾಲಿನ ಒಂದು ಬದಿಗೆ ಇಟ್ಟರು. ಅಷ್ಟರಲ್ಲಿ ಒಳಗೆ ಬಂದ ಕೃಷ್ಣಾರೆಡ್ಡಿ 'ಉಣ್ಣಕ್ಕಿಕ್ಕೆ' ಎಂದು ಹೆಂಡತಿಗೆ ಹೇಳಿ ಕೈ ತೊಳೆದುಕೊಂಡು ಹಾಲಿಗೆ ಬಂದ. ಸುಶೀಲ ಚಾಪೆಯನ್ನು ಹಾಸಿ ತಟ್ಟೆಯನ್ನು ತಂದು ಇಟ್ಟಳು. ಕೃಷ್ಣಾರೆಡ್ಡಿ ಟೀವಿ ರಿಮೋಟನ್ನು ಕೈಗೆ ತೆಗೆದುಕೊಂಡು ಒತ್ತಿ, ನ್ಯೂಸ್ ಚಾನಲ್ಲನ್ನು ಹಾಕಿ ತಟ್ಟೆಯಲ್ಲಿರುವ ಮುದ್ದೆಗೆ ಕೈಹಾಕಿದ. ಟೀವಿಯಲ್ಲಿ ಮಹಿಳಾ ಕುಸ್ತಿಪಟು ಕಣ್ಣೀರಿಡುತ್ತಾ ತನಗಾದ ಲೈಂಗಿಕ ದೌರ್ಜನ್ಯವನ್ನು ವಿವರಿಸುತ್ತಿದ್ದಳು. ಅವಳ ಜೊತೆಗಿದ್ದ ಒಂದಷ್ಟು ಮಂದಿಯೂ ಕ್ರೀಡೆಯಲ್ಲಿ ಮಹಿಳೆಯರು ಎದುರಿಸಬೇಕಾದ ಲೈಂಗಿಕ ದೌರ್ಜನ್ಯದ ಬಗೆಯನ್ನು ಉದಾಹರಣೆಯ ಸಮೇತ ಸಾಕ್ಷೀಕರಿಸುತ್ತಿದ್ದರು. ಕೃಷ್ಣಾರೆಡ್ಡಿ 'ಇವರ್ದೊಂದು ರ್‍ಯಾಗ' ಎನ್ನುತ್ತಾ ಚಾನೆಲ್ ಬದಲಿಸಲು ರಿಮೋಟ್ ಕೈಗೆ ತೆಗೆದುಕೊಂಡ. ಕುಸುಮ 'ಅಪ್ಪಾ ಅದೇ ಇರ್ಲಿ ಆಕು' ಎಂದಳು. ಕೃಷ್ಣಾರೆಡ್ಡಿ 'ಲೇ, ನೀ ಇಂತವೆಲ್ಲ ನೋಡ್ಬಾರ್ದು... ಸುಮ್ಕಿರು' ಎಂದು ಗದರಿದ. ರಂಗಜ್ಜಿ 'ಏನೆ ಅದು ಕುಸ್ಮ?' ಎನ್ನುತ್ತಾ ತಲೆಯನ್ನು ತುಸುವೆ ಹೊರಳಿಸಿ ಟೀವಿ ಕಡೆಗೆ ನೋಡಿದಳು. ಹುಡುಗಿಯೊಬ್ಬಳು ಅಳುತ್ತಿರುವುದು ಟೀವಿ ಪರದೆಯ ಮೇಲೆ ಮಂಜು ಮಂಜಾಗಿ ಕಂಡಿತು. 'ಓ... ಅವ್ಳು ನನ್ನ ಮೊಮ್ಮಗ್ಳು' ಎಂದು ಕೂಗಿದಳು. ಎಲ್ಲರೂ ವಿಚಿತ್ರವಾಗಿ ರಂಗಜ್ಜಿಯ ಕಡೆಗೆ ನೋಡಿದರು. ಅವಳು ಮತ್ತೆ 'ಅವ್ಳೇ ನನ್ನ ಮೊಮ್ಮಗ್ಳು' ಎಂದು ಮತ್ತೆ ಕೂಗಿದಳು. ಕೃಷ್ಣಾರೆಡ್ಡಿ 'ಅವುಳು ನಿಂಕ್ಯಾವ ಸೀಮೆ ಮೊಮ್ಮಗ್ಳು' ಎಂದು ನುಡಿದು ಟೀವಿಯನ್ನು ಆರಿಸಿದ. ತುಸು ಹೊತ್ತು ಸುಮ್ಮನಿದ್ದ ರಂಗಜ್ಜಿ 'ಲೇ, ಅವುಳು ಎಂಟನೇ ಕ್ಲಾಸ್ನಾಗೆ ಓಡೋಗಿದ್ದಲ್ಲ ನನ ಮಗ್ಳು... ಅವುಳ ಮಗ್ಳೋ. ಬೆಂಗ್ಳೂರ್‍ನಾಗೆ ಅವ್ರೆ' ಎಂದು ನುಡಿದು ಟೀವಿಯ ಕಡೆಗೆ ನೋಡಿದಳು. ಅದು ತಣ್ಣಗಾಗಿತ್ತು. ಸುಶೀಲ ಮತ್ತು ಕುಸುಮಳಿಗೆ ಇದ್ದರೂ ಇರಬಹುದೆ ಎಂಬ ಅನುಮಾನ ಬಂದು ವಿಚಿತ್ರವಾಗಿ ರಂಗಜ್ಜಿಯ ಕಡೆಗೆ ನೋಡತೊಡಗಿದರು. ಅವಳು ಟೀವಿಯ ಪರದೆಯ ಕಡೆಗೇ ನೋಡುತ್ತಲಿದ್ದಳು. ಅವಳಿಗೆ ಮಂಜುಮಂಜಾದ ಆ ಚಿತ್ರ ಕಣ್ಣಿನಲ್ಲಿ ಅಚ್ಚಾಗಿ ಕುಳಿತಿತ್ತು. ಕೃಷ್ಣಾರೆಡ್ಡಿ ತಲೆ ಕೆರೆದುಕೊಳ್ಳುತ್ತಾ ವಿಚಿತ್ರವಾಗಿ ಒದರಿದ. ಅಷ್ಟರಲ್ಲಿ ಅವನ ಊಟವೂ ಮುಗಿದಿತ್ತು. ಕೈ ತೊಳೆದವನೆ 'ಲೇ ತಟ್ಟೆ ಎತ್ತೆ' ಎಂದು ಕೂಗುತ್ತಾ ಎದ್ದ. ಅಡುಗೆ ಮನೆಯಲ್ಲಿ ಏನೋ ಮಾಡುತ್ತಿದ್ದ ಸುಶೀಲ ಓಡಿಬಂದಳು. ಕುಸುಮ 'ಅಪ್ಪಾ, ಅಮ್ಮ ಒಳಗೆ ಏನೋ ಮಾಡ್ತಾ ಇರ್ತಾರೆ. ತಟ್ಟೇನ ನೀನೆ ತಕೊಂಡೋಗಿ ಬಚ್ಚಲಲ್ಲಿ ಇಡಬೋದಲ್ಲ' ಎಂದು ನುಡಿದಳು. ಕೃಷ್ಣಾರೆಡ್ಡಿ ಹೆಂಡತಿಯ ಕಡೆಗೆ ದುರುಗುಟ್ಟುತ್ತಾ 'ಇದೇನಾ ನೀ ಮಗುಳ್ಗೆ ಕಲಿಸ್ತಿರೋ ಬುದ್ಧಿ. ನಾಚ್ಕೆ ಆಗಾಕಿಲ್ಲ. ಹೆಣ್ಣಂದ್ರೆ ಯೆಂಗಿರಬೇಕು ಅಂತ ಮೊದ್ಲು ಹೇಳ್ಕೊಡು' ಎಂದು ಕಿರುಚುತ್ತಾ ಆಚೆ ನಡೆದ. ಕುಸುಮಳ 'ಇನಮೇಕೆ ಈ ಮನೆನಾಗೆ ಅವರವ್ರು ತಿಂದ ತಟ್ಟೇನ ಅವ್ರೇ ಎತ್ಬೇಕು. ನೀನಾರು ಸರಿ, ಅವ್ರುನಾದ್ರು ಸರಿ' ಎಂಬ ಮಾತು ಕೃಷ್ಣಾರೆಡ್ಡಿಯನ್ನು ಹಿಂಬಾಲಿಸಿತು. ಅವನು ಕುದಿಯುತ್ತಾ ನಡೆಯತೊಡಗಿದ. ರಂಗಜ್ಜಿ ಕುಸುಮಳ ಕಡೆಗೇ ನೋಡತೊಡಗಿದಳು. ●